**ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ**

**ಅಫಜಲಪೂರ.**

**ಸಿ.ಸಿ. ನಂ.262/2014**

**ರೇವೂರ ಪೋಲಿಸ್ ಠಾಣೆ**

// ವಿರುದ್ಧ //

**ಚಂದ್ರಕಾಂತ ಹಾಗೂ ಇತರರು**

# ಃದೋಷಾರೋಪಣೆಃ

1. ಚಂದ್ರ್ರಕಾಂತ ತಂದೆ ಮಹಾದೇವ ಸಜ್ಜನ,
   ವಃ47 ವರ್ಷ, ಉ ತಾ.ಪಂ.ಅಫಜಲಪೂರದ ಲೆ.ಪ.ಅಧಿಕಾರಿ,
   ಸಾ|| ಬಿದ್ದಾಪೂರ ಕಾಲೋನಿ, ಗುಲ್ಬರ್ಗಾ. **(ಮೃತ)**

2. ಬಸವರಾಜ ತಂದೆ ಭೀಮಣ್ಣ ಮುಗದೆ
   ವಃ48 ವರ್ಷ, ಉಃ ಒಕ್ಕಲುತನ, ಸಾ|| ನೀಲೂರ
   **(ಮೃತ)**

3. ವಹಾದೇವಿ ಗಂಡ ಬಸವರಾಜ ಮುಗದೆ
   ವಃ40 ವರ್ಷ, ಉಃ ಮನೆಲಕೆಲಸ, ಸಾ|| ನೀಲೂರ

4. ಔದಂಬರ ತಂದೆ ರಾಮ ನಿಕ್ಕಂ
   ವಃ50 ವರ್ಷ, ಉಃ ವ್ಯಾಪಾರ, ಸಾ|| ನೀಲೂರ
   ಆರೋಪಿಗಳಾದ ನಿಮ್ಮ ಮೇಲೆ....

ನಾನು **ಅಶೋಕ .ಟಿ**, ಬಿ.ಎ., ಎಲ್‌ಎಲ್‌ಬಿ, ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಅಫಜಲಪುರ. ಆರೋಪಿಸುವುದೇನೆಂದರೆ,

ಮೋಲನೇದಾಗಿ 1ನೇ ಆರೋಪಿತನು ಅಫಜಲಪುರನಲ್ಲಿ 2010 ಮತ್ತು 2011ನೇ ಸಾಲಿನಲ್ಲಿ ತಾಲೂಕಾ ಪಂಚಾಯತಿಯ ಲೆಕ್ಕಾಧೀಕ್ಷಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾಗ, ಸರಕಾರಕ್ಕೆ ಮೋಸ ಮಾಡುವ ಉದ್ದೇಶದಿಂದ 2 ರಿಂದ 4 ನೇ ಆರೋಪಿತರ ಜೊತೆ ಶಾಮಿಲಾಗಿ ಕೈ ಪಂಪು ಮತ್ತು

ನೀರು ಸರಬರಾಜು ನಿರ್ವಾಹಣೆಗಾಗಿ ಸರಕಾರದಿಂದ ಬಿಡಗಡೆಯಾದ ಅನುದಾನ ಡಿ.ಡಿ.ಗಳನ್ನು ಬೇರೆ ಬೇರೆ ಪಂಚಾಯಿತಿಯ ಹೆಸರಿನಲ್ಲಿದ್ದು, ಅವುಗಳನ್ನು ಸಂಬಂಧಪಟ್ಟ ಪಿ.ಡಿ.ಓ ಗಳಿಗೆ ಕೊಡದೇ, 1 ನೇ ಆರೋಪಿ ಪಿ.ಡಿ.ಓ ಗಳಿಗೆ ಸುತ್ತೋಲೆ ಮುಟ್ಟಿದ ಬಗ್ಗೆ ಈ ಹಿಂದೆ ಇದ್ದ ಪಿ.ಡಿ.ಓ ರವರಗಳಿಂದ ಒಂದ ಹಾಳೆಯ ಮೇಲೆ ಸಹಿ ಪಡೆದುಕೊಂಡು ಡಿ.ಡಿ. ಗಳನ್ನು ವಿತರಣೆ ಮಾಡಿದ ಹಾಗೆ ಡಿ.ಡಿ. ನಂಬರಗಳನ್ನು ಮತ್ತು ಹಣದ ಮೊತ್ತವನ್ನು ನಮೂದಿಸಿಕೊಂಡು, ಒಟ್ಟು ರೂ.10,73,175/- ರಷ್ಟು ಹಣವನ್ನು 2ನೇ ಆರೋಪಿಯ ಸಹಾಯದಿಂದ 3 ಮತ್ತು 4 ನೇ ಆರೋಪಿತರ ಖಾತೆಗಳಿಗೆ ಜಮಾ ಮಾಡಿ ಹಣಪಡೆದು ತಮ್ಮ ಸ್ವಂತಕ್ಕೆ ಬಳಸಿಕೊಂಡು ಸರ್ಕಾರಕ್ಕೆ ನಂಬಿಕೆ ದ್ರೋಹ ಮಾಡಿ ಆ ಮೂಲಕ ಭಾರತ ದಂಡ ಸಂಹಿತೆ ಕಲಂಃ 409 ಸಹವಾಚಕ 34 ರಡಿಯಲ್ಲಿ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಎಸಗಿರುತ್ತೀರಿ.

ಎರಡನೇಯದಾಗಿ ಮೇಲೆ ತಿಳಿಸಿದ ಅವಧಿಯ ಸಾಲಿನಲ್ಲಿ ಆರೋಪಿತರು ಏಕೋದ್ದೇಶವನ್ನು ಹೊಂದಿ, 1 ನೇ ಆರೋಪಿತನು ಕೈ ಪಂಪು ಮತ್ತು ನೀರು ಸರಬರಾಜಗೆ ಸಂಬಂಧಪಟ್ಟ ಅನುದಾನದ ಡಿ.ಡಿ. ಗಳ ಮೊತ್ತ ರೂ.6,89,175/- ಹಾಗೂ ಗ್ರಾಮ ಪಂಚಾಯಿತಿಯ ಸದಸ್ಯರ ಗೌರವಧನದ ಡಿ.ಡಿ.ಗಳ ಮೊತ್ತ ರೂ.96,000/- ಗಳನ್ನು 2 ನೇ ಆರೋಪಿತನ ಸಹಾಯದಿಂದ 3 ನೇ ಆರೋಪಿತಳಾದ ನೀನು ನಿನ್ನ ಖಾತೆಗೆ ಜಮಾ ಮಾಡಿಸಿ ಅದನ್ನು ದಿನಾಂಕಃ 11.05.2011 ರಿಂದ 23.06.2011 ವರೆಗೆ ಸದರಿ ಹಣವನ್ನು ಡ್ರಾ ಮಾಡಿಕೊಂಡು ಹಾಗೂ ಅದೇ ರೀತಿಯಾಗಿ ಗ್ರಾಮ ಪಂಚಾಯಿತಿಯ ಸದಸ್ಯರ ಗೌರವಧನ ಕುರಿತು ಪಂಚಾಯತಿಯ ಪಿ.ಡಿ.ಓ ರವರಿಗೆ ನೀಡಬೇಕಾದ ಡಿ.ಡಿ.ಗಳ ಮೊತ್ತ ರೂ.2,88,00/- ಗಳನ್ನು 1 ನೇ ಆರೋಪಿತನು 4 ನೇ ಆರೋಪಿತರ ಖಾತೆಗೆ ಜಮಾ ಮಾಡಿಸಿ ಅದನ್ನು ದಿನಾಂಕಃ23.07.2011 ಮತ್ತು ದಿನಾಂಕಃ13.08.2011 ರಂದು ಹಣವನ್ನು ಡ್ರಾ ಮಾಡಿಕೊಂಡು ಹೀಗೆ ಒಟ್ಟು ರೂ.10,73,175/- ರಷ್ಟು ಹಣವನ್ನು ಮೋಸದಿಂದ ಸ್ವಂತಕ್ಕೆ ಬಳಸಿಕೊಂಡು ಸರ್ಕಾರಕ್ಕೆ ವಂಚಿಸಿ ಆ ಮೂಲಕ ಭಾರತ ದಂಡ ಸಂಹಿತೆ ಕಲಂಃ 420 ಸಹವಾಚಕ 34 ರಡಿಯಲ್ಲಿ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಎಸಗಿರುತ್ತೀರಿ.

ಮೂರನೇಯದಾಗಿ ಮೇಲೆ ತಿಳಿಸಿದ ಅವಧಿಯ ಸಾಲಿನಲ್ಲಿ ಆರೋಪಿತರು ಏಕೋದ್ದೇಶವನ್ನು ಹೊಂದಿ, ನೀಲೂರಿನ ವಿ.ಎಸ್.ಎಸ್.ಎನ್ ಬ್ಯಾಂಕಿನಲ್ಲಿ ಕಾರ್ಯದರ್ಶಿಯಾಗಿ ಕರ್ತವ್ಯ

ನಿರ್ವಹಿಸುತ್ತಿರುವ ಚಾಸಾ-11 ರವರಾದ ಈರಣ್ಣಾ ರವರಿಗೆ ಸದರಿ ಡಿ.ಡಿ.ಗಳನ್ನು 3 ನೇ ಆರೋಪಿತಳ ಖಾತೆಗೆ ಜಮಾ ಮಾಡುವಂತೆ ಒತ್ತಾಯ ಪೂರ್ವಕವಾಗಿ 2 ನೇ ಆರೋಪಿತನು ಜೀವ ಬೆದರಿಕೆ ಹಾಕಿ ಆ ಮೂಲಕ ಭಾರತ ದಂಡ ಸಂಹಿತೆ ಕಲಂಃ506 ಸಹವಾಚಕ 34 ರಡಿಯಲ್ಲಿ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಎಸಗಿರುತ್ತೀ ರಿ.

ದಿನಾಂಕಃ13-08-2019. ಜೆಎಮ್ಎಫ್ಸಿ, ಅಫಜಲಪೂರ.

## ಆರೋಪಿತರ ಹೇಳಿಕೆ

ಪ್ರ-1 ನಿಮಗೆ ಮೇಲೆ ಓದಿ ಹೇಳಲಾದ ದೋಷಾರೋಪಣೆ ಅರ್ಥವಾಯಿತೆ?
ಉಃ

ಪ್ರ-2 ನೀವು ನಿಮ್ಮ ತಪ್ಪನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆ ಬಯಸುತ್ತಿರೋ?
ಉಃ

ಈ ಮೂಲಕ ದೃಢೀಕರಿಸುವುದೇನೆಂದರೆ ಮೇಲೆ ಹೇಳಿದ ಅರೋಪಣೆಗಳನ್ನು ಅರೋಪಿತರಿಗೆ ಅವರಿಗೆ ತಿಳಿಯುವ ಭಾಷೆಯಲ್ಲಿ ಓದಿ ಹೇಳಿ ಅವರುಗಳು ನೀಡಿದ ಉತ್ತರವನ್ನು ಯತಾಸ್ಥಿತಿಯಲ್ಲಿ ಬರೆದುಕೊಂಡಿದ್ದು ನಿಜವಿರುತ್ತದೆ

ದಿನಾಂಕಃ13-08-2019. ಜೆಎಮ್ಎಫ್ಸಿ, ಅಫಜಲಪೂರ.